ಅಮ್ಮಾ! ಅಲ್ಲಿ ಈಗ ಅನೇಕ ಮನೆಗಳಾಗಿವೆ. ಅಂಗಡಿಗಳಾಗಿವೆ. ಅದಿಂದು ಸಂತೆಯ ಸ್ಥಳವಾಗಿದೆ. ರೆಚೆಲ್ ಗೇಟಿನ ಬಳಿ ಸ್ವಲ್ಪ ಸ್ಥಳವಿತ್ತು. ಆ ಕಟ್ಟಡವನ್ನು ಕೆಡಹುವ ಕೆಲಸ ಈಗ ನಡೀತಾ ಇದೆ. ಅದನ್ನು ಯಾರೋ ಗುಜರಾತಿ ಶ್ರೀಮಂತ ಖರೀದಿಸಿದ್ದಾನಂತೆ. ಅಲ್ಲಿ ನಾಲ್ಕು ಮಹಡಿಯ ರಹಿವಾಸಿ ಕಟ್ಟಡ ಕಟ್ಟುತ್ತಾರಂತೆ'.

ಮಗಳ ಮಾತು ಕೇಳಿ ಸುಷಮಾಳಿಗೆ ಗಂಟಲಲ್ಲಿ ಏನೋ ಸಿಕ್ಕಿಕೊಂಡಂತಾಯಿತು. ಅವಳು ಒಂದು ಬಗೆಯ ಉದಾಸೀನಳಾಗಿ ಮಗಳ ಮುಖವನ್ನೇ ನೋಡುತ್ತ ಕುಳಿತಳು. ರೀನಾ ಅಂದರೆ ಸುದತ್ತಾ ಚಪ್ಪಾಳೆ ತಟ್ಟುತ್ತ, 'ಅಜ್ಜಿ ಹೇಗಿದೆ ರಿಯಲ್ ಸರ್‌ಪ್ರೈಸ್?' ಅಂದಳು.

ಅವಳ ಮಾತು ಕೇಳಿಸದಂತೆ ಸುಷಮಾ ನಿಂತೇ ಇದ್ದಳು. ಅವಳು ಮೌನಧರಿಸಿದಂತೆ ಸ್ತಬ್ಧಳಾಗಿ ನಿಂತವಳು ತಕ್ಷಣ ಮುಖ ತಿರುವಿ ಕಿಟಕಿಯ ಬಳಿ ಹೋಗಿ ಹೊರಗೆ ನೋಡತೊಡಗಿದಳು. ಮುಂದಿನ ಭಾಗ ಕತ್ತಲೆಯಲ್ಲಿ ಮುಳುಗಿ ಹೋಗಿತ್ತು. ಅಲ್ಲಿ ಹುಗಿದಿರುವ ಕಬ್ಬಿಣದ ಕಂಬಿಗಳು ನರುಗತ್ತಲಲ್ಲಿಯೂ ತಮ್ಮ ಅಸ್ತಿತ್ವ ಸಾರಿ ಹೇಳುತ್ತಿದ್ದವು. ಕಟ್ಟಡದ ಕೆಲಸ ಶುರುವಾಗಿತ್ತು. ಬೀದಿ ದೀಪಗಳ ಬೆಳಕಿನಲ್ಲಿ ಪ್ಲಾಸ್ಟಿಕ್ ಮತ್ತು ಟಾರ್‌ಪಲ್ಲಿನ ಮುಚ್ಚಿಗೆಯ ಎರಡು ಗುಡಿಸಲು ಮೂಕವಾಗಿ ನಿಂತಿದ್ದವು. ಆ ಗುಡಿಸಲಿನಿಂದ ಮಕ್ಕಳು ಅಳುವ ಕೂಗು ಕೇಳುತ್ತಿತ್ತು. ಆ ಮಕ್ಕಳು ಕಟ್ಟಡದ ಕೆಲಸ ಮಾಡುವ ಕೂಲಿಕಾರರದ್ದಿರಬೇಕು.

'ಅಮ್ಮಾ, ನೀನಿಷ್ಟು ಇಮೋಶನಲ್ ಆಗುವ ಅಗತ್ಯವಿಲ್ಲ. ಅಷ್ಟೊಂದು ದೂರದಿಂದ ಬಂದಿದ್ದಿ, ಊಟ ಮಾಡು – ಅಲ್ಲೇಕೆ ನಿಂತಿದ್ದೀ? ಇಲ್ಲಿ ಬಾ ರಾತ್ರಿಯಾಗಿದೆ, ಹಾಯಾಗಿ ಊಟ ಮಾಡಿ ಮಲಗು. ಬೆಳಗ್ಗೆ ಎದ್ದು ಸುತ್ತಾಡಿ ಬಾ. ನಿನ್ನ ಪರಿಚಯದವರು ಸಿಕ್ಕರೆ ಹೊಟ್ಟೆತುಂಬ ಮಾತಾಡಿಕೊಂಡು ಬಾ. ನಮ್ಮ ಮನೆಯ ಎದುರು ಬೀದಿಯ ಆಚೆ ಒಂದು ಸೊಗಸಾದ ಪಾರ್ಕ್ ಇದೆ. ಅಲ್ಲಿಗೆ ಮಾರ್ನಿಂಗ್ ವಾಕ್ ಮಾಡಿದರೆ ಬೆಳಗ್ಗೆ ಎದ್ದು ಸುತ್ತಾಡುವ ನಿನ್ನ ಅಭ್ಯಾಸವೂ ಪೂರ್ಣವಾದಂತಾಗುತ್ತದೆ.'

ಮಕ್ಕಳ ಜತೆ ಅದೂ ಇದೂ ಮಾತಾಡುವುದರಲ್ಲಿ ಯಾವಾಗ ಹನ್ನೊಂದು ಗಂಟೆ ಆಯಿತೋ ಗೊತ್ತಾಗಲಿಲ್ಲ. ಊಟದ ಶಾಸ್ತ್ರ ಮುಗಿಸಿ ಅವಳು ಹಾಸಿಗೆಯ ಮೇಲುರುಳಿದಳು. ಕಣ್ಣುಗಳಿಂದ ನಿದ್ದೆ ಮಾಯವಾಗಿತ್ತು. ಮನಸ್ಸು ಅಸ್ತವ್ಯಸ್ತವಾಗಿತ್ತು. ಬುದ್ಧಿ ಕೆಲಸ ಮಾಡುತ್ತಿರಲಿಲ್ಲ. ಅವಳಿಗೆ ಯಾವುದೋ ವಸ್ತು ಕಳೆದುಕೊಂಡಂತೆ, ಎಷ್ಟು ಹುಡುಕಿದರೂ ಸಿಗದಂತಾಗಿತ್ತು. ಎಷ್ಟು ಪ್ರಯತ್ನಿಸಿದರೂ ಸುಷಮಾಗೆ ನಿದ್ದೆ ಬರಲಿಲ್ಲ. ರಾತ್ರಿಯಿಡೀ ಮಗ್ಗಲು ಬದಲಿಸುತ್ತ ಅತ್ತಿತ್ತ ಹೊರಳಾಡುತ್ತ ಹಾಸಿಗೆಯಲ್ಲಿ ಬಿದ್ದುಕೊಂಡಿದ್ದಳು. ಬೆಳಕು ಹರಿಯುವ ಮುನ್ನ ಅವಳಿಗರಿವಿಲ್ಲದಂತೆ ನಿದ್ದೆ ಆವರಿಸಿ, ಎದ್ದಾಗ ಏಳೂವರೆ ಗಂಟೆಯಾಗಿತ್ತು. ಆಕಾಶ ಮೇಘಾಚ್ಛಾದಿತವಾಗಿತ್ತು. ಅವಳಿಗೆ ಇಂಥ ವಾತಾವರಣ ಹಿಡಿಸುತ್ತದೆ. ಅವಳು ಲಗುಬಗನೆ ತಯಾರಾಗಿ ಗೇಟ್ ತೆರೆದು ಹೊರಗೆ ಹೊರಟು ಬಿಟ್ಟಳು. ಎಡಬದಿಗೆ ಹತ್ತು ಹೆಜ್ಜೆಯಿಡುವಷ್ಟರಲ್ಲಿ ರಸ್ತೆಯ ಅಂಚಿನಲ್ಲಿ, ದೊಡ್ಡ ಬೌಂಡ್ರಿಯ ಒಳಗೆ ಕಾಂಕ್ರಿಟ್ ಮಿಕ್ಸರ್ ಇಟ್ಟಿಗೆಗಳ ರಾಶಿ, ಚಿಪ್ಸ್, ದೊಡ್ಡ ದೊಡ್ಡ ಕಂಬಿಗಳಿಂದ ಮಾಡಿದ ಜಾಳಿಗೆಗಳು ಇಟ್ಟಿದ್ದನ್ನು ನೋಡಿದಳು. ಹಠಾತ್ ಅವಳ ಕಣ್ಣು ಬಲಬದಿಯಲ್ಲಿರುವ ಕಂಬದ ಮೇಲೆ ಬಿತ್ತು. ಪ್ರಾಯಃ ಅದೊಂದೇ ವಸ್ತು ಯಂತ್ರ ದಾನವರಿಂದ ಪಾರಾಗಿ ಉಳಿದದ್ದು! ಅವಳಿಗೆ ಅನಿಸಿತು, ಅವಳ ರಿಚಿ ಆಂಟಿಯ ಸ್ಮೃತಿಶಿಲ್ಪ ಅವಳ ಬರುವಿಕೆಯನ್ನೆ ಕಾದು ನಿಂತಂತಿತ್ತು. ತನ್ನ ಕನ್ನಡಕದ ಗ್ಲಾಸ್‌ಗಳನ್ನು ಸೆರಗಿನಿಂದ ಒರೆಸಿ ಮೂಗಿನ ಮೇಲೆ ಇಟ್ಟುಕೊಳ್ಳುತ್ತ ನೆಲದ ಮೇಲೆ ಬಿದ್ದ, ದೂಳಿನಿಂದ ಮುಚ್ಚಿಹೋದ ಒಂದು ಸಂಗಮರವರಿ ಫಲಕ ನೋಡಿ ಕೈಯಿಂದ ದೂಳು ಸರಿಸಿ ನೋಡಿದಾಗ ಅದರ ಮೇಲೆ 'ರೆಚೆಲ್ ಕಾಟೆಜ್' ಎಂದು ಬರೆದದ್ದು ಕಾಣಿಸಿತು. ಇಂಗ್ಲಿಷಿನಲ್ಲಿ ಬರೆದ 'ಆರ್' ಅಕ್ಷರ ಕಲಾತ್ಮಕವಾಗಿ ಬರೆಯಲಾಗಿತ್ತು. ಇಷ್ಟು ವರ್ಷಗಳಿಂದ ದೂಳು ಧೂಸರದಲ್ಲಿ ಬಿದ್ದುಕೊಂಡರೂ